◆ **ಅಕ್ಕನಾಗಮ್ಮನನ್ನು ಹೊರತುಪಡಿಸಿ ಬೇರೆ ಶರಣರ ಬಗ್ಗೆ ಯಾವ ಹೊಸ ಮಾಹಿತಿಗಳು ನಿಮಗೆ ಮೌಖಿಕ ಆಕರಗಳಲ್ಲಿ ಸಿಕ್ಕಿವೆ? ಮಾಹಿತಿಗಾಗಿ ಒಂದೆರಡು ಹಂಚಿಕೊಳ್ಳಬಹುದೆ?**

ಈಗ ಬಿಜ್ಜಳನ ಕೊಲೆಗೆ ಸಂಬಂಧಪಟ್ಟಂತೆ ಅನೇಕ ಮಾಹಿತಿಗಳು ಸಿಗುತ್ತವೆ. ಮಲ್ಲಿಬೊಮ್ಮನ ಬಗ್ಗೆ ಕಾವ್ಯ, ಕಥೆ, ಹಾಡು, ಸ್ಮಾರಕಗಳು ಸಿಗುತ್ತವೆ. ರೇವಣಸಿದ್ಧರ ಬಗೆಗೂ ನೂರಾರು ಮಾಹಿತಿಗಳು ಮೌಖಿಕ ಆಕರದಲ್ಲಿವೆ. ರೇಣುಕಾಚರ್ಯರಿಗೂ ರೇವಣಸಿದ್ಧರಿಗೂ ಯಾವ ಸಂಬಂಧವೂ ಇಲ್ಲ. ರೇವಣಸಿದ್ಧರು ಆಯಾ ಜಾತಿಗೊಂದು ಮಠ ಕಟ್ಟಿ ಆಯಾ ಜಾತಿಯ ವ್ಯಕ್ತಿಗಳನ್ನು ಪೂಜೆಗೆ ನೇಮಿಸಿದರು. ಚಿತ್ರದುರ್ಗದ ಸ್ವಾಮಿಗಳು ಈಗ ಈ ಪ್ರಯೋಗ ಮಾಡುತ್ತಿದ್ದಾರೆ. ಆದರೆ, ರೇವಣಸಿದ್ಧರು ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಹದಿನೆಂಟು ಕೇರಿಗಳಲ್ಲಿ ಅವರವರ ಮಠ ಕಟ್ಟಿದ್ದಾರೆ. ಅಂದರೆ, ಪೂಜೆ ಮಾಡುವ ಅವಕಾಶ ಎಲ್ಲಾ ಸಮುದಾಯದವರಿಗೂ ಸಿಗಲಿ ಅಂತ. ಹಿಂಗಾಗಿ, ನೀವು ಸ್ಮಾರಕಗಳನ್ನು ನೋಡಿದರೆ ಅವುಗಳ ಸುತ್ತಾ ಅನೇಕ ಕೇರಿಗಳಿದ್ದದ್ದು ನೋಡಬಹುದು. ಜನರನ್ನು ಹಿಡಕೊಂಡು ಕಲ್ಯಾಣಕ್ಕೆ ತರುವ ಕೆಲಸ ಮಾಡಿದವರು ಅಲ್ಲಮಪ್ರಭು. ಸಿದ್ಧರಾಮನನ್ನು ಕಲ್ಯಾಣಕ್ಕೆ ತಂದು ಕೂಡಿಸಿದವರೇ ಅಲ್ಲಮಪ್ರಭು. ಮುಕ್ತಾಯಕ್ಕ ಕೂಡ ಇಲ್ಲಿಗೆ ಬಂದದ್ದು ಅಲ್ಲಮನಿಂದಲೇ. ಎರಡನೂರಾ ಅರವತ್ತು ಹಳ್ಳಿಗಳನ್ನು ಓಡಾಡೀವಿ. ಆರುನೂರಕ್ಕೂ ಹೆಚ್ಚು ಸ್ಮಾರಕಗಳನ್ನು ಕಲೆಹಾಕಿದ್ದೀವಿ. ಇವೆಲ್ಲ ಐತಿಹಾಸಿಕ ಸ್ಥಳಗಳು. ಮಡಿವಾಳ ಮಾಚಿದೇವರ ಪಾತ್ರ ಎಂಥದ್ದು ಎಂಬುದು ನಮಗೆ ಸ್ಮಾರಕಗಳಿಂದ ಗೊತ್ತಾಗುತ್ತದೆ. ಚೆನ್ನಬಸವಣ್ಣ ಮತ್ತು ಮಡಿವಾಳ ಮಾಚಿದೇವ ಇಬ್ಬರೂ ಶರಣರ ತಿರುಗಾಟಕ್ಕೆ ಅನುಕೂಲ ಮಾಡಿಕೊಟ್ಟರು. ಬಸವಣ್ಣ ಹೋದಮೇಲೆ ಚೆನ್ನಬಸವಣ್ಣ ಮುಖ್ಯನಾದ. ಹೀಗಾಗಿ ಚೆನ್ನಬಸವಣ್ಣನನ್ನು ಸಂರಕ್ಷಿಸುವ ಕೆಲಸ ಮಡಿವಾಳ ಮಾಚಿದೇವರು ಮಾಡಿದರು. ಅಂದಕ್ಕೆಂದೆ ಚೆನ್ನಬಸವಣ್ಣನವರ ಕ್ಯಾಂಪು ಸುರಕ್ಷಿತ ಸ್ಥಳದಲ್ಲಿದ್ದರೆ ಅಲ್ಲೇ ಹತ್ತಿರದಲ್ಲಿ ಮಡಿವಾಳ ಮಾಚಿದೇವರ ಕ್ಯಾಂಪ್ ಇರುತ್ತದೆ. ಶಂಕರದಾಸಿಮಯ್ಯ ಮತ್ತು ದೇವರದಾಸಿಮಯ್ಯ ಕಲ್ಯಾಣಕ್ಕೆ ಬಂದ ಗುರುತುಗಳು ದಾರಿಯುದ್ದಕ್ಕೂ ಸಿಗುತ್ತವೆ. ಶಂಕರದಾಸಿಮಯ್ಯ ಬಣಗಾರ ಪೈಕಿ ಅವರು. ಅವರಗಿ ಸಂಬಂಧಿಸಿದ ಮಾಹಿತಿ ಹಟಗಾರ ಗಲ್ಲಿಯಲ್ಲಿ ಸಿಗುತ್ತದೆ. ಬಸವಕಲ್ಯಾಣದ ಶಂಕರದಾಸಿಮಯ್ಯ ಮಠದಲ್ಲಿ ಕತ್ತರಿ ಚಿತ್ರವಿರುವ ಕಲ್ಲೊಂದಿದೆ. ಕಲ್ಲಿನ ಮೇಲೆ ಕತ್ತರಿ ಚಿತ್ರವಿದೆ. ಅಲ್ಲಿ ಪರುಷಕಟ್ಟೆ ಇದೆ. ಬಸವಣ್ಣನವರಿಗೆ ಸಂಬಂಧಿಸಿ ಖರೇ ಗುರುತು ಉಳಿದದ್ದು ಪರುಷಕಟ್ಟೆಯಲ್ಲೆ. ಅಲ್ಲಿಯೇ ಅವರ ಜನಸಂಪರ್ಕ ನಡೆಯುತ್ತಿತ್ತು. ಸ್ಮಾರಕಗಳ ಅಧ್ಯಯನದಲ್ಲಿ ಇದು ಗೊತ್ತಾಯ್ತು. ಯಾಕಂದ್ರ, ಕೆಲ ಮೂಲ ಕಲ್ಪನೆಗಳು ಕಾಲ ಗತಿಸಿದರೂ ಉಳಕೊಂಡು ಬರ್ತಾವ.

## ವಿಕ್ರಂ ವಿಸಾಜಿ

ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು. ಮೂಲತಃ ಬೀದರ ಜಿಲ್ಲೆಯ ಭಾಲ್ಕಿಯವರಾದ ವಿಕ್ರಂ, ಕಲಬುರ್ಗಿಯ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. 'ತಮಾಷಾ', 'ಗ್ರೀಕ್ ಹೊಸ ಕಾವ್ಯ', 'ರಕ್ತ ವಿಲಾಪ', 'ಬಿಸಿಲ ಕಾಡಿನ ಹಣ್ಣು', 'ರಸಗಂಗಾಧರ', 'ಮತ್ತೆ ಬಂತು ಶ್ರಾವಣ', 'ನಾದಗಳು ನುಡಿಯಾಗಲೇ', 'ಪಠ್ಯದ ಭಾವಾವಳಿ' ಅವರ ಕೆಲವು ಪ್ರಕಟಿತ ಪುಸ್ತಕಗಳಾಗಿವೆ.